ದಿನಾಂಕಃ 05.01.2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಬಿ ಎಂ ಎಲ್ ಜಿ ವಕೀಲರಿಂದಃ ಆರೋಪಿತರ ಪರವಾಗಿಃ

18. 2 ನೇ ಆರೋಪಿಯ ತಂದೆಯ ತಂದೆ ಮತ್ತು ನಿಮ್ಮ ತಂದೆಯ ತಂದೆ ಒಬ್ಬರೇ ಎಂದರೆ ಸರಿಯಲ್ಲ. ಫ್ರಾಸಾ.1 ನನ್ನ ಸ್ವಂತ ತಮ್ಮ. 2 ನೇ ಆರೋಪಿ ಸಂಬಂಧದಲ್ಲಿ ನಿಮಗೆ ಅಕ್ಕನಾಗಬೇಕು ಎಂದರೆ ಸರಿಯಲ್ಲ. ಮೂರ್ತಪ್ಪ ತರೀಕೆರೆ ಪೊಲೀಸ್ ಠಾಣೆಯಲ್ಲಿ ಪೇದೆಯಾಗಿ ಕೆಲಸ ಮಾಡುತ್ತಿದ್ದಾಗಿ ಹೇಳಿದ್ದೀರಿ ಹಾಗೇ ಆತ ಎಷ್ಟು ವರ್ಷಗಳಿಂದ ಕೆಲಸ ಮಾಡಿಕೊಂಡಿದ್ದಾನೆ ಎಂದರೆ ಸಾಕ್ಷಿ ಸುಮಾರು 20 ವರ್ಷಗಳಿಂದ ಎನ್ನುತ್ತಾರೆ.

19. ನಾನು ಈಗ್ಗೆ 6 ವರ್ಷಗಳಿಂದ ಗ್ರಾಮ ಸಹಾಯಕನಾಗಿ ಕೆಲಸ ಮಾಡುತ್ತಿದ್ದೇನೆ. ಮೃತ ಲತಾಳ ಕೈಬರಹ ಮತ್ತು ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ನಿಡಿ.1 ರಲ್ಲಿರುವ ಬರವಣಿಗೆ ಮತ್ತು ರುಜು ಲತಾಳದ್ದಲ್ಲ. ಲತಾ ಬದುಕಿದ್ದ ಸಮಯದಲ್ಲಿ 1 ನೇ ಆರೋಪಿಯನ್ನು ಪ್ರೀತಿಸುತ್ತಿದ್ದಳು ಎಂದರೆ ಸರಿಯಲ್ಲ. ದಿನಾಂಕ 19.09.2018

ರಂದು ಮೃತ ಲತಾ ಅಜ್ಜಂಪುರ ಪೊಲೀಸ್ ಠಾಣೆಗೆ ಅರ್ಜಿಯನ್ನು ಸಲ್ಲಿಸಿ ಆಕೆ 1 ನೇ ಆರೋಪಿಯನ್ನು ಪ್ರೀತಿಸುತ್ತಿರುವುದಾಗಿ ತಿಳಿಸಿ ಆಕೆಯ ಮದುವೆಯನ್ನು 1 ನೇ ಆರೋಪಿಯೊಂದಿಗೆ ಮಾಡಿಸಿಕೊಡಬೇಕು ಎಂದು ಕೇಳಿಕೊಂಡಿದ್ದಳು ಎಂದರೆ ಸರಿಯಲ್ಲ.

20. ನನಗೆ ಪಾಪಣ್ಣ ಎಂಬ ಚಿಕ್ಕಪ್ಪ ಇದ್ದರು, ಆತ ಆರಕ್ಷಕ ಉಪ ನಿರೀಕ್ಷಕನಾಗಿ ಕೆಲಸ ಮಾಡುತ್ತಿದ್ದರು, ಆತ ನಿವೃತ್ತಿಯಾಗಿ ನಂತರ ತೀರಿಕೊಂಡಿದ್ದಾರೆ. ಸದರಿ ಪಾಪಣ್ಣರವರು 2 ನೇ ಆರೋಪಿಯ ತಂದೆಯಿಂದ ತೋಟದ ಬಗ್ಗೆ ಪತ್ರವನ್ನು ಬರೆಸಿಕೊಂಡಿದ್ದ ಬಗ್ಗೆ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಲಾಗಿತ್ತು ಎಂದರೆ ಸರಿಯಲ್ಲ. ಲತಾ ಶಿವಮೊಗ್ಗದಲ್ಲಿ ಓದುವ ಪೂರ್ವದಲ್ಲಿ ಎಲ್ಲಿ ವ್ಯಾಸಂಗ ಮಾಡುತ್ತಿದ್ದಳು ಎಂದರೆ ಸಾಕ್ಷಿ ಬುಕ್ಕಾಂಬೂದಿಯಲ್ಲಿ ಎನ್ನುತ್ತಾರೆ. ಮೃತೆ ಲತಾ ವ್ಯಾಸಂಗ ಮಾಡುತ್ತಿದ್ದ ಕಾಲೇಜಿನಲ್ಲಿಯೇ 1 ನೇ ಆರೋಪಿಯು ಸಹ ವ್ಯಾಸಂಗ ಮಾಡುತ್ತಿದ್ದನು ಎಂದರೆ ನನಗೆ ಗೊತ್ತಿಲ್ಲ. ಪಿ ಯು ಸಿ ನಂತರ 1 ನೇ ಆರೋಪಿ ವ್ಯಾಸಂಗವನ್ನು ನಿಲ್ಲಿಸಿ ಹಾಲಿನ ಡೈರಿಯ ವಾಹನದಲ್ಲಿ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದನು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಆರೋಪಿ ತನ್ನ

ವಾಹನವನ್ನು ನಿಮ್ಮ ಊರಿನಲ್ಲಿಯೇ ನಿಲ್ಲಿಸಿ ನಿಮ್ಮ ಅಣ್ಣನ ಮನೆಯಲ್ಲಿಯೇ ಮಲಗುತ್ತಿದ್ದನು ಎಂದರೆ ಸರಿಯಲ್ಲ.

21. 1 ನೇ ಆರೋಪಿ ಮತ್ತು ಮೃತೆ ಲತಾ ತುಂಬಾ ಅನ್ಯೂನ್ಯವಾಗಿದ್ದರು ಮತ್ತು ಒಬ್ಬರನ್ನೊಬ್ಬರು ಬಿಟ್ಟು ಇರುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಕೆಲಸದ ಅವಧಿ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆ. ನಾನು ಮತ್ತು ಫ್ರಾಸಾ.1 ಬೇರೆ ಬೇರೆ ವಾಸವಾಗಿದ್ದೇವೆ. ಲತಾಳ ಸಾವಿನ ಬಗ್ಗೆ ನಾನು ಪೊಲೀಸರನ್ನಾಗಲೀ, ಆಕೆಯ ಮರಣೋತ್ತರ ಪರೀಕ್ಷೆಯನ್ನು ನಡೆಸಿದ ವೈದ್ಯರನ್ನಾಗಲೀ ವಿಚಾರಿಸಿಲ್ಲ. ಲತಾ ಶಿವಮೊಗ್ಗದಲ್ಲಿ ವ್ಯಾಸಂಗ ಮಾಡುತ್ತಿದ್ದ ಸಮಯದಲ್ಲಿ ಆಕೆಯನ್ನು ಮಾತನಾಡಿಸಿಕೊಂಡು ಬರಲು ನಾನು ಅಲ್ಲಿಗೆ ಎಂದಿಗೂ ಹೋಗಿಲ್ಲ. ಚೀರನಹಳ್ಳಿಯಿಂದ ದಂದೂರಿಗೆ ಸುಮಾರು 2 ವರೆ ಕಿಲೋ ಮೀಟರ್ ದೂರವಿದೆ. ಬುಕ್ಕಾಂಬೂದಿಯಿಂದ ಚೀರನಹಳ್ಳಿಗೆ ಎಷ್ಟು ದೂರವಾಗುತ್ತದೆ ಎಂದು ನನಗೆ ಗೊತ್ತಿಲ್ಲ.

22. ಲತಾ ಮತ್ತು 1 ನೇ ಆರೋಪಿ ಮದುವೆಯಾದ 15-20 ದಿನಗಳ ನಂತರ ನನಗೆ ಆ ಬಗ್ಗೆ ತಿಳಿಯಿತು. ನಂತರ ನೀವು ಲತಾಳನ್ನು ಕರೆದು ಮಾತನಾಡಿಸಿದ್ದೀರಾ ಎಂದರೆ ಸಾಕ್ಷಿ

ಇಲ್ಲ ಎನ್ನುತ್ತಾರೆ. ಮದುವೆಯ ಸಮಯದಲ್ಲಿ ಲತಾಳನ್ನು ಯಾರು ಯಾರು ಕರೆದುಕೊಂಡು ಹೋಗಿದ್ದರು ಎಂದು ನಿಮಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ, ಆದರೆ ನಂತರ ತಿಳಿಯಿತು ಎನ್ನುತ್ತಾರೆ. 1 ನೇ ಆರೋಪಿ ಬೋವಿ ಜನಾಂಗದ ಹುಡುಗಿಯನ್ನು ಪ್ರೀತಿಸುತ್ತಿದ್ದಾಗಿ ಹೇಳಿದ್ದೀರಿ ಆಕೆ ಯಾವ ಊರಿನವಳು ಮತ್ತು ಆಕೆಯ ಹೆಸರೇನು ಮತ್ತು ಆಕೆಯ ವಿಳಾಸ ಗೊತ್ತೇ ಎಂದರೆ ಸಾಕ್ಷಿ ಆಕೆ ಬುಕ್ಕಾಂಬೂದಿಯವಳು ಎಂದು ಗೊತ್ತು, ಬೇರೆ ವಿವರ ಗೊತ್ತಿಲ್ಲ ಎನ್ನುತ್ತಾರೆ.

23. ಸ್ವಲ್ಪ ದಿನಗಳ ನಂತರ ಆರೋಪಿತರು ಲತಾಳಿಗೆ ಹೊಡೆಯುವುದು, ಬಡಿಯುವುದು ಮಾಡಿ ಹಿಂಸೆ ಕೊಡುತ್ತಿದ್ದಾಗಿ ಹೇಳಿದ್ದೀರಿ ಆ ವಿಚಾರವನ್ನು ನಿಮಗೆ ಯಾರು ತಿಳಿಸಿದರು ಎಂದರೆ ಸಾಕ್ಷಿ ಬುಕ್ಕಾಂಬೂದಿಯಿಂದ ವೀಳೆದೆಲೆ ಮಾರಲು ಬರುವ ಒಬ್ಬ ಹೆಂಗಸು ಹೇಳಿದ್ದಳು ಎನ್ನುತ್ತಾರೆ. ಆಕೆಯ ಹೆಸರು ನನಗೆ ಗೊತ್ತಿಲ್ಲ. ಲತಾ ಮೃತಪಡುವ ಸಮಯದಲ್ಲಿ ಆಕೆಯೊಂದಿಗೆ ಮನೆಯಲ್ಲಿ ಯಾರು ಯಾರು ವಾಸವಿದ್ದರು ಎಂದರೆ ಸಾಕ್ಷಿ ಆಕೆ ಮತ್ತು 1 ನೇ ಆರೋಪಿ ವಾಸವಾಗಿದ್ದರು ಆದರೆ ಆಕೆ ಮೃತಪಡುವ ದಿನ ಸುಮಾರು 8-9 ಜನ ಅವರ ಮನೆಯಲ್ಲಿ ಇದ್ದುದ್ದಾಗಿ ತಿಳಿಯಿತು. ಆ

ವಿಚಾರ ಯಾರಿಂದ ಮತ್ತು ಯಾವಾಗ ತಿಳಿಯಿತು ಎಂದರೆ ಸಾಕ್ಷಿ ಆಕೆ ಮೃತಪಟ್ಟ ವಿಷಯ ತಿಳಿದು ನಾವು ಅಲ್ಲಿಗೆ ಹೋದಾಗ ಅಕ್ಕಪಕ್ಕದ ಜನ ಆ ರೀತಿ ಮಾತನಾಡುತ್ತಿದ್ದರು ಎನ್ನುತ್ತಾರೆ. ಈ ವಿಚಾರವನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿಯೇ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

24. ಲತಾ ವಿಷವನ್ನು ಕುಡಿದಿದ್ದಾಗಿ ಹೇಳಿದ್ದೀರಿ, ಆ ರೀತಿ ಆಕೆ ವಿಷವನ್ನು ಕುಡಿದ ದಿನಾಂಕ ಮತ್ತು ತಿಂಗಳು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಲತಾಳ ಮದುವೆಯಾದ ಬಳಿಕ ಆಕೆಯನ್ನು ನನ್ನ ತಮ್ಮ ಆತನ ಮನೆಗೆ ಎಂದಿಗೂ ಕರೆಸಿರಲಿಲ್ಲ. ಲತಾಳ ಮದುವೆಯಾದ ಬಳಿಕ 2 ರಿಂದ 4 ನೇ ಆರೋಪಿತರು ಶಿವನಿಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಲತಾ ಮೃತಪಟ್ಟ ವಿಚಾರ ತಿಳಿದು ಆಕೆಯ ಮನೆಯ ಬಳಿ ಹೋಗಿದ್ದಾಗಿ ಹೇಳಿದ್ದೀರಿ ಆ ಸಮಯದಲ್ಲಿ ನೀವು ಆಕೆಯ ಮನೆಯ ಅಕ್ಕಪಕ್ಕ ವಾಸವಿದ್ದವರನ್ನು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ವಿಚಾರಿಸಿದ್ದೇನೆ, ಆದರೆ ಅವರು ಆರೋಪಿತರನ್ನು ಕುರಿತು ಅವರು ತುಂಬಾ ಕೆಟ್ಟವರು ಅವರ ಬಗ್ಗೆ ಏನು ಹೇಳುವುದಿಲ್ಲ ಎಂದು ಹೇಳಿದರು. ಸದರಿ ಅಕ್ಕಪಕ್ಕದವರ ಹೆಸರು ನನಗೆ ಗೊತ್ತಿಲ್ಲ.

25. ನಾವು ಅಲ್ಲಿಗೆ ಹೋದಾಗ ಪೊಲೀಸರು ಸ್ಥಳದಲ್ಲಿ ಇದ್ದರು. ಆಗ ದಂಡೂರಿನಿಂದ ನಾವು ಒಟ್ಟು 70-80 ಜನ ಹೋಗಿದ್ದೆವು. ನನ್ನೊಂದಿಗೆ ನನ್ನ ತಮ್ಮ ಮತ್ತು ಆತನ ಹೆಂಡತಿಯೂ ಸಹ ಬಂದಿದ್ದರು. ನಾವು ಅಲ್ಲಿಗೆ ಹೋಗುವಷ್ಟರಲ್ಲಿ ಲತಾಳ ಶವವನ್ನು ನೇಣಿನ ಕುಣಿಕೆಯಿಂದ ಬಿಚ್ಚಿದ್ದರು. ನಾನು ಅಲ್ಲಿಗೆ ಹೋಗುವಷ್ಟರಲ್ಲಿ ಪೊಲೀಸರು ಬರವಣಿಗೆಯನ್ನು ಮಾಡಿಕೊಳ್ಳುತ್ತಿದ್ದರು. ಪೊಲೀಸರು ಸ್ಥಳದಲ್ಲಿಯೇ ನನ್ನ ಹೇಳಿಕೆಯನ್ನು ಪಡೆದುಕೊಂಡರು. ಆಗ ಸಮಯ ಸುಮಾರು ಮಧ್ಯಾಹ್ನ 1.00 ಗಂಟೆಯಾಗಿತ್ತು. ಅಲ್ಲಿ ಪೊಲೀಸರು ಫೋಟೋಗಳನ್ನು ತೆಗೆದುಕೊಂಡಿದ್ದಾಗಿ ಹೇಳಿದ್ದೀರಿ ಅವುಗಳನ್ನು ಯಾರು ಯಾವ ಸಾಧನದಿಂದ ತೆಗೆದುಕೊಂಡರು ಎಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಲತಾ ಮೃತಪಡುವ ರಾತ್ರಿ 1 ನೇ ಆರೋಪಿ ಲತಾಳೊಂದಿಗೆ ಮನೆಯಲ್ಲಿ ಇದ್ದ ಬಗ್ಗೆ ತಿಳಿದುಕೊಂಡಿದ್ದೇನೆ. ಆ ವಿಚಾರವನ್ನು ಅಕ್ಕಪಕ್ಕದ ಮನೆಯುವರು ತಿಳಿಸಿದರು. ಆದರೆ ಅವರು ಯಾರು ಎಂದು ನನಗೆ ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ.

26. ನೀವು ಲತಾಳ ಶವವನ್ನು ನೋಡಿದಾಗ ಆಕೆಯ ಕೈ ಮತ್ತು ಕಾಲಿನಲ್ಲಿ ಗಾಯಗಳು ಇದ್ದುದ್ದಾಗಿ ಹೇಳಿದ್ದೀರಿ ಆ ರೀತಿ ಎಷ್ಟು ಗಾಯಗಳಿದ್ದವು ಎಂದರೆ ಸಾಕ್ಷಿ ನಾನು ನೋವಿನಲ್ಲಿ ಇದ್ದುದ್ದರಿಂದ ಅವುಗಳನ್ನು ಗಮನಿಸಿಲ್ಲ ಎನ್ನುತ್ತಾರೆ. ಆ ದಿನ

ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿದ್ದನ್ನು ಹೊರತುಪಡಿಸಿ ನಾನು ಬೇರೆ ಯಾವುದೇ ದಿನದಂದು ಯಾರಿಗೂ ಹೇಳಿಕೆಯನ್ನು ಕೊಟ್ಟಿಲ್ಲ. ಲತಾ ದಿನಾಂಕ 19.04.2019 ರಂದು ರಾತ್ರಿ 7.00 ಗಂಟೆಗೆ ಆಕೆಯ ದೊಡ್ಡಮ್ಮನಾದ ರತ್ನಮ್ಮಳಿಗೆ ಕರೆ ಮಾಡಿ 1 ನೇ ಆರೋಪಿಗೆ ಆಟೋವನ್ನು ಖರೀದಿ ಮಾಡಲು ರೂ.50,000/- ಹಣವನ್ನು ಆಕೆಯ ತಂದೆಯಿಂದ ಪಡೆದುಕೊಂಡು ಬರುವಂತೆ ಹಿಂಸೆ ಕೊಡುತ್ತಿದ್ದಾಗಿ ನಿಮಗೆ ತಿಳಿಯಿತು ಎಂದು ಹೇಳಿದ್ದೀರಿ ಆ ವಿಚಾರವನ್ನು ನೀವು ಪೊಲೀಸರು ನಿಮ್ಮನ್ನು ವಿಚಾರಿಸಿದರು ಎಂದು ಹೇಳಲಾದ ಸಮಯದಲ್ಲಿ ನೀವು ಅವರಿಗೆ ತಿಳಿಸಿಲ್ಲ ಎಂದರೆ ಸಾಕ್ಷಿ ತಿಳಿಸಿದ್ದೇನೆ ಎನ್ನುತ್ತಾರೆ.

27. ದಿನಾಂಕ 19.04.2019 ರಂದು ರಾತ್ರಿ 10.00 ಗಂಟೆ ಸಮಯಕ್ಕೆ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಮತ್ತು ಮೂರ್ತಪ್ಪ, ಆತನ ಹೆಂಡತಿ ಭಾಗ್ಯ, ವಿನಯ್, ಸುಶೀಲಮ್ಮರವರುಗಳ ಚಿತಾವಣೆಯಿಂದ ಅವರೆಲ್ಲಾ ಸೇರಿ ಹಿಂಸೆ ಕೊಟ್ಟು ರಾತ್ರಿ ಯಾವುದೋ ಸಮಯದಲ್ಲಿ ಲತಾಳ ಕೊರಳಿಗೆ ಹಗ್ಗದಿಂದ ಎಳೆದಾಗ ಹಗ್ಗ ತುಂಡಾಗಿರುತ್ತದೆ ನಂತರ ಅವಳ ವೇಲಿನಿಂದ ಮೇಲ್ಚಾವಣಿಯ ಅಡಿಕೆ ಬೊಂಬಿಗೆ ಅವಳೇ ಆತ್ಮಹತ್ಯೆ ಮಾಡಿಕೊಂಡಂತೆ ತಿಳಿದುಕೊಳ್ಳಲಿ ಎಂದು ಸಾಯಿಸಿ ನೇಣು ಹಾಕಿರುತ್ತಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಮೂರ್ತಪ್ಪ ಮತ್ತು ಆತನ ಹೆಂಡತಿ ಭಾಗ್ಯ ತರೀಕೆರೆಯಲ್ಲಿ

ವಾಸವಾಗಿದ್ದಾರೆ. ಬುಕ್ಕಾಂಬೂದಿಯಿಂದ ತರೀಕೆರೆಗೆ ಸುಮಾರು 30 ಕಿಲೋ ಮೀಟರ್ ದೂರವಾಗಬಹುದು. 19 ನೇ ತಾರೀಖಿನಂದು ಮೂರ್ತಪ್ಪ ತರೀಕೆರೆಯಲ್ಲಿಯೇ ಕರ್ತವ್ಯ ನಿರ್ವಹಿಸುತ್ತಿದ್ದಾಗಿ ತಿಳಿದುಕೊಂಡಿದ್ದೇನೆ.

28. ಸದರಿ ಮೂರ್ತಪ್ಪನ ಹಿರಿಯ ಅಧಿಕಾರಿಗಳಿಗೆ ನಾನು ಯಾವುದೇ ದೂರನ್ನು ಕೊಟ್ಟಿಲ್ಲ. ಲತಾ ಮೃತಪಟ್ಟ ದಿನ ಮತ್ತು ಸಮಯದಲ್ಲಿ ಆರೋಪಿತರು ಯಾರು ಆಕೆಯೊಂದಿಗೆ ಇರಲಿಲ್ಲ, ಲತಾಳು ಬೆಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದರೆ ಸರಿಯಲ್ಲ. ಶಿವನಿಯಿಂದ ಬುಕ್ಕಾಂಬೂದಿಗೆ ಸುಮಾರು 4 ಕಿಲೋ ಮೀಟರ್ ದೂರವಿದೆ. ಲತಾ ಮೃತಪಟ್ಟ ವಿಚಾರವನ್ನು ಹೊರತುಪಡಿಸಿ ನಿಮಗೆ ಬೇರೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಲತಾ ನಿಮ್ಮ ಸಂಬಂಧಿಯಾಗಿರುವ ಕಾರಣ ಆರೋಪಿತರ ವಿರುದ್ಧ ಸುಳ್ಳು ಆರೋಪ ಹೊರಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ